**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**

**ಸಿ.ಸಿ ನಂಃ 726/ 2017**

| | | |
|---|---|---|
| ಸಾಕ್ಷಿಯ ಹೆಸರುಃ | ಶಾಂತಿಬಾಯಿ | ಪ್ರಾಸಾಃ 01 |
| ತಂದೆ/ಗಂಡನ ಹೆಸರುಃ | ರೇವ್ಯಾ ರಾಠೋಡ | ಚಾಸಾಃ 01 |
| ವಯಸ್ಸುಃ | 48 ವರ್ಷ | ದಿಃ 08-02-2021 |
| ಉದ್ಯೋಗಃ | ಮನೆ ಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಕುರಕುಂಬಳ , ಮುಂಡರಗಿ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ದಿಃ 26-07-2015 ರಂದು ಮುಂಜಾನೆ 11-00 ಗಂಟೆ ಸಮಯಕ್ಕೆ ಯಾವುದೇ ಘಟನೆಯಾಗಿರುವುದಿಲ್ಲ. ಆರೋಪಿಯು ನನ್ನ ದೊಡ್ಡಪ್ಪ ಮಗನಾಗೇಕು. ನಾನು ಆರೋಪಿಯ ವಿರುದ್ಧ ಪೋಲಿಸರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ಆರೋಪಿಯು ನನ್ನ ಮೇಲೆ ಯಾವುದೆ ಹಲ್ಲೆಯನ್ನು ಮಾಡಿರುವುದಿಲ್ಲ. ನನಗೆ ಅವಾಚ್ಯ ಶಬ್ದದಿಂದ ಬೈದಿರುವುದಿಲ್ಲ. ನನ್ನ ತಲೆಯ ಮೇಲಿನ ಓಡನಿಯನ್ನು ಹಿಡಿದು ಎಳೆದಾಡಿರುವುದಿಲ್ಲ. ಆರೋಪಿ ನನ್ನ ಮನೆಗೆ ಅತೀಕ್ರಮ ಪ್ರವೇಶ ಮಾಡಿರುವುದಿಲ್ಲ.

**( ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಡಲು ಅನುಮತಿ ಕೋರಿದರು - ಅನುಮತಿ ನೀಡಲಾಯಿತು)**

**ಪಾಟೀ ಸವಾಲು : ಮಾನ್ಯ ಸ.ಸ.ಅ. ರವರಿಂದಃ**

ದಿಃ 26-07-2015 ರಂದು ಮುಂಜಾನೆ 11-00 ಗಂಟೆ ಸಮಯಕ್ಕೆ ನಾನು ಮತ್ತು ಚಾಸಾಃ4 ರವರು ಮನೆಯಲ್ಲಿದ್ದಾಗ ಆರೋಪಿಯು ನಮ್ಮ ಮನೆಗೆ ಅತಿಕ್ರಮಣ ಪ್ರವೇಶ ಮಾಡಿ ನನ್ನ ಗಂಡನನ್ನು ಉದ್ದೇಶಿಸಿ ಏ ರೇವ್ಯಾ ಮಗನೇ ಹೊರಗೆ ಬಾ ನಿನಗೆ ನೋಡಿಕೊಳ್ಳುತ್ತೇನೆ, ನಿನ್ನನ್ನು ಈ ತಾಂಡಾದಲ್ಲಿ ಬಹಳ ಆಗಿದೆ ಇವತ್ತು ನಿನಗೆ ಬಿಡುವುದಿಲ್ಲ ಎಂದು ಅವಾಚ್ಯ ಶಬ್ದದಿಂದ ಬೈದಾಗ ನಾನು ಆರೋಪಿಯಲ್ಲಿ ಯಾಕೆ ನನ್ನ ಗಂಡನಿಗೆ ಬೈಯ್ಯುತ್ತಿ ಎಂದು ಪ್ರಶ್ನಿಸಿದಾಗ ನನಗೆ ಆರೋಪಿಯು ಅವಾಚ್ಯ ಶಬ್ದದಿಂದ ಬೈದು ನನ್ನ

ತಲೆಯ ಮೇಲಿನ ಓಡನಿಯನ್ನು ಹಿಡಿದು ಜಗ್ಗಾಡಿ ಕೈಯಿಂದ ಕಪಾಳಕ್ಕೆ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. ಜಗಳವನ್ನು ಬಿಡಿಸಲು ಬಂದ ಚಾಸಾಃ4 ರವರಿಗೆ ಆರೋಪಿಯು ಅವಾಚ್ಯ ಶಬ್ದದಿಂದಂ ಬೈದು ಕೈಯಿಂದ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. ಆ ಸಮಯಕ್ಕೆ ಚಾಸಾಃ5 ಮತ್ತು 6 ರವರು ಬಂದು ಜಗಳ ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ನನಗೂ ಮತ್ತು ಚಾಸಾಃ4 ರವರಿಗೆ ಜೀವದ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ. ಈ ಬಗ್ಗೆ ಅದೇ ದಿನ ನಾನು ಯಾದಗಿರಿ ಗ್ರಾಮೀಣ ಪೋಲಿಸ ಠ-ಣೆಯಲ್ಲಿ ಆರೋಪಿಯ ವಿರುದ್ದ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ತಾನು ನೀಡಿದ ದೂರನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು , ಹಾಗೂ ಸಾಕ್ಷಿಯ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದಂರಿದ ಅದನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಪೋಲಿಸರ ಹೇಳಿಕೆಂಟು ಮೇರೆಗೆ ತಾನು ನಿಪಿ-1 ರಲ್ಲಿ ತನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ ಎಂದು ಹಾಗೂ ನಿಪಿ-1 ರಲ್ಲಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ದಿಃ 28-07-2015 ರಂದು ನಾನು ಪೋಲಿಸರಿಗೆ ಗುನ್ನೆ ಸ್ಥಳವನ್ನು ತೋರಿಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ಆರೋಪಿಯೊಂದಿಗೆ ರಾಜಿಯಾಗಿ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಸಿ ಎಸ್ ಎಂ ಪಿ ವಕೀಲರಿಂದಃ**

ಯಾವುದೇ ಪಾಟೀ ಸವಾಲು ಇರುವುದಿಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ**